CC –1264/2020
PW –2
CW –3

ದಿನಾಂಕಃ 06.08.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ– ಆರೋಪಿಗಳ ಪರ ಶ್ರೀ.ಎಸ್ ಎನ್ ಪಿ ವಕೀಲರಿಂದಃ–

2 ನೇ ಆರೋಪಿಯು 1 ನೇ ಆರೋಪಿಯ ಮೇಲೆ ಹಿಸ್ಸಾ ದಾವೆ ಹಾಕಿದ್ದು ಅದರಲ್ಲಿ ನನ್ನ ಮಗಳಿಗೆ ಭಾಗ ತಪ್ಪಿಹೋಗುತ್ತದೆ ಎಂದು ನಾನು ಆರೋಪಿಗಳ ಮೇಲೆ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು 2 ನೇ ಆರೋಪಿಯ ಮೇಲೆ ಗಲಾಟೆ ಮಾಡಿದ್ದರಿಂದ ನನ್ನ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ದಾಖಲಾಗಿರುವ ಪ್ರಕರಣ ಇದೇ ನ್ಯಾಯಾಲಯದಲ್ಲಿ ಸಿಸಿ 262/2020 ರಂತೆ ಪ್ರಕರಣ ನಡೆಯುತ್ತಿದೆ ಎಂದರೆ ಸರಿ. ದಿಃ 20.12.2019 ರಂದು ನಾನು 2 ನೇ ಆರೋಪಿಯ ಮೇಲೆ ಹಲ್ಲೆ ಮಾಡಿದ್ದೇನೆ ಎಂದು ನನ್ನ ವಿರುದ್ಧ ದಾಖಲಾದ ಪ್ರಕರಣದ ಪ್ರತಿಯಾಗಿ ನಾನು ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮುಖ್ಯವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಗಲಾಟೆ ಆಗಿಲ್ಲ, ಜಗಳ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ 1 ರವರಿಗೆ ಯಾವುದೇ ತರಹದ ಹಿಂಸೆ ಅಥವಾ ವರದಕ್ಷಿಣೆ ಕಿರುಕುಳ ನೀಡಿಲ್ಲ ಎಂದರೆ ಸಾಕ್ಷಿಯು ಬಹಳ ನೀಡಿದ್ದಾರೆ ಎಂದು ನುಡಿಯುತ್ತಾರೆ. 2 ನೇ ಆರೋಪಿಯು ಮಾತ್ರ ಮಲ್ಲಿಗೇನಹಳ್ಳಿ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. 1, 3 ರಿಂದ 8 ನೇ ಆರೋಪಿಗಳು ಬೇರೆ ಬೇರೆ ಊರಿನವರು ಎಂದರೆ ಸರಿಯಲ್ಲ. 3 ನೇ ಆರೋಪಿಯು ಕುಂದೂರು ಗ್ರಾಮಸ್ಥರಾಗಿದ್ದು, 2 ಮತ್ತು 4 ನೇ ಆರೋಪಿಗಳು ಶಿವಮೊಗ್ಗದಲ್ಲಿ ವಾಸವಿರುತ್ತಾರೆ ಎಂದರೆ ಸರಿ ಮುಂದುವರೆದು ಸಾಕ್ಷಿಯು ಗಲಾಟೆ ನಡೆದ ದಿನ ಮಲ್ಲಿಗೇನಹಳ್ಳಿ ಗ್ರಾಮದಲ್ಲಿದ್ದರು ಎಂದರೆ ಸರಿ. 7 ನೇ ಆರೋಪಿಯು ನಮಗಾಗಲೀ ಉಳಿದ ಆರೋಪಿಗಳಿಗಾಗಲೀ ಸಂಬಂಧಿಕರಲ್ಲ

ಎಂದರೆ ಸಾಕ್ಷಿಯು 1 ನೇ ಆರೋಪಿಗೆ ಸಂಬಂಧಿಯಾಗಿರುತ್ತಾರೆ ಎಂದರೆ ಸರಿ. 2, 4 ಮತ್ತು 7 ನೇ ಆರೋಪಿಗಳು ಮಲ್ಲಿಗೇನಹಳ್ಳಿ ಗ್ರಾಮಸ್ಥರಲ್ಲ ಹಾಗೂ ಚಾಸಾ 1 ರವರ ಮೇಲೆ ಯಾವತ್ತೂ ಸಹ ಜಗಳ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ 1 ರವರ ಮೇಲೆ ಯಾವುದೇ ಗಲಾಟೆ ಮಾಡಿಲ್ಲ, ಕಿರುಕುಳ ನೀಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಪ್ರಾಣ ಬೆದರಿಕೆ ಹಾಕಿಲ್ಲ ಆದರೂ ಸಹ ಚಾಸಾ 1 ರವರಿಗೆ ಹಿಸ್ಸೆ ಭಾಗ ತಪ್ಪುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ರವರು ನನ್ನ ಮಗಳಾಗಿದ್ದು ಅವರೇ ದೂರುದಾರರಾಗಿದ್ದರಿಂದ ನಾನು ಅವರ ಪರ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.